# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 958 |
| ಸದಸ್ಯರ ಹೆಸರು | : | ಶ್ರೀ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22.02.2024 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರವು ಟ್ರಾಫಿಕ್ ಸಂಚಾರ ದಟ್ಟಣೆಯ ಪ್ರಮಾಣದಲ್ಲಿ ದೇಶದ 2ನೇ ನಗರವೆಂದು ಖಾಸಗಿ ಸಂಸ್ಥೆಯವರು ನಡೆಸಿದ ಸಮೀಕ್ಷೆಯ ವರದಿಯಲ್ಲಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರದ ನಿಲುವೇನು; | ಬಂದಿದೆ.<br>ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆಯನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ) | ಈ ಸಂಚಾರ ದಟ್ಟಣೆ ಬಗ್ಗೆ ಸರ್ಕಾರವು ನೂತನವಾಗಿ ಯಾವ ಯಾವ ಯೋಜನೆಯನ್ನು ರೂಪಿಸಿದೆ; | **ಅನುಬಂಧ-2**ರಲ್ಲಿ ಒದಗಿಸಿದೆ. |
| ಇ) | ನಗರ ಸಂಚಾರ ದಟ್ಟಣೆ ನಿರ್ವಹಣೆಗೆ ಕಳೆದ ಮೂರು ವರ್ಷದಲ್ಲಿ ಆಗಿರುವ ವೆಚ್ಚ ಎಷ್ಟು? (ಠಾಣಾವಾರು ಮಾಹಿತಿ ನೀಡುವುದು) | ಬೆಂಗಳೂರು ನಗರ ಸಂಚಾರ ವಿಭಾಗಕ್ಕೆ ರಸ್ತೆ ಸುರಕ್ಷತಾ ನಿಧಿಯಿಂದ ಕಳೆದ ಮೂರು ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಿರುವ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ. |

| ಕ್ರಮ ಸಂಖ್ಯೆ | ವರ್ಷ | ಅನುದಾನ ಬಿಡುಗಡೆಯಾದ ಮೊತ್ತ |
|---|---|---|
| 1 | 2021-22 | 20,46,49,545-00 |
| 2 | 2022-23 | 63,85,29,613-00 |
| 3 | 2023-24 | 54,62,00,000-00 |

**ಹೆಚ್‌ಡಿ 53 ಎಸ್‌ಎಸ್‌ಟಿ 2024**

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

## ಅನುಬಂಧ–1

ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ಹೆಚ್ಚಿನ ಸಂಖ್ಯೆಯ ವಾಹನಗಳ ಪರಿಣಾಮವಾಗಿ ಸಂಚಾರ ದಟ್ಟಣೆಯು ಸಹ ಹೆಚ್ಚಾಗುತ್ತಿದ್ದು, ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಸಂಚಾರ ದಟ್ಟಣೆಯನ್ನು ತಿಳಿಗೊಳಿಸಲು ಬೆಂಗಳೂರು ನಗರ ಸಂಚಾರ ವಿಭಾಗದಿಂದ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತಿರುತ್ತದೆ, ವಿವರ ಈ ಕೆಳಕಂಡಂತಿವೆ.

1. ಅತಿ ಹೆಚ್ಚು ಸಂಚಾರ ದಟ್ಟಣೆ ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಜಾರಿ(365 ರಸ್ತೆಗಳು)
2. ಪ್ರಮುಖ ರಸ್ತೆಗಳಲ್ಲಿ ವಾಹನಗಳ ನಿಲುಗಡೆ ನಿಷೇಧ
3. ಬಲ ತಿರುವು ಮತ್ತು "ಯು" ತಿರುವುಗಳ ನಿಷೇಧ
4. ಸಂಚಾರ ನಿರ್ವಹಣಾ ಕೇಂದ್ರವನ್ನು ಸ್ಥಾಪಿಸಿದ್ದು, ಸುಗಮ ಸಂಚಾರಕ್ಕೆ ಅಗತ್ಯವಾದ ಕ್ರಮಗಳನ್ನು ನಿರ್ವಹಣೆ ಮಾಡುವಲ್ಲಿ ಹಾಗೂ ನಿಗಾವಣೆ ಮಾಡುವಲ್ಲಿ ಯಶಸ್ವಿಯಾಗಿ ವಿವಿದ ಸಂಚಾರ ದಟ್ಟಣೆ ನಿವಾರಣಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ.
5. ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಗೆ ಗೃಹರಕ್ಷಕ ಸಿಬ್ಬಂದಿ ಮತ್ತು ಟ್ರಾಫಿಕ್ ವಾರ್ಡನ್‌ಗಳ ತೊಡಗಿಸಿಕೊಳ್ಳುವಿಕೆ
6. ಸಿಗ್ನಲ್ ಫ್ರೀ ಕಾರಿಡಾರ್ ವ್ಯವಸ್ಥೆ
7. ಮುಕ್ತ ಎಡ ತಿರುವು ವ್ಯವಸ್ಥೆ
8. ಸಂಚಾರ ನಿಯಮ ಉಲ್ಲಂಘನೆ ಎಸಗುವವರ ವಿರುದ್ಧ ವಿಶೇಷ ಕಾರ್ಯಚರಣೆ
9. ಪೆಲಿಕಾನ್ ಸಿಗ್ನಲ್ ಲೈಟ್ ಅಳವಡಿಕೆ
10. ಸಂಚಾರ ಸೂಚನಾ ಫಲಕಗಳ ಅಳವಡಿಕೆ
11. ಪ್ರತಿ ಸಂಚಾರ ಪೊಲೀಸ್ ಠಾಣೆಯಲ್ಲಿ ಮಾದರಿ ರಸ್ತೆಗಳು ಮತ್ತು ಝೀರೋ ಟಾಲರೆನ್ಸ್ ರಸ್ತೆಗಳ ಆಯ್ಕೆ
12. ಸಂಚಾರ ನಿರ್ವಹಣೆಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ
13. ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆಗೆದು ವೈಜ್ಞಾನಿಕ ರಸ್ತೆ ಉಬ್ಬುಗಳ ನಿರ್ಮಾಣ
14. ಸಂಪರ್ಕ ರಹಿತ ನಿಯಮ ಜಾರಿಗೆ ಹೆಚ್ಚು ಉತ್ತೇಜನ
15. ಅಡ್ಡಾದಿಡ್ಡಿ ವಾಹನಗಳ ನಿಲುಗಡೆ ನಿಯಂತ್ರಣ
16. ಅತಿವೇಗವಾಗಿ ಚಲಿಸುವ ವಾಹನಗಳಿಗೆ ನಿಯಂತ್ರಣ
17. ಅಪಾಯಕಾರಿ ರೀತಿಯಲ್ಲಿ ಚಲಿಸುವ ವಾಹನ ಚಾಲಕ/ಸವಾರರ ವಿರುದ್ಧ ಪರಿಣಾಮಕಾರಿ ಕ್ರಮ
18. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ
19. ವೀಲ್ಹಿಂಗ್ ಮತ್ತು ಡ್ರ್ಯಾಗ್ ರೇಸ್ ಮಾಡುವವರು ವಿರುದ್ಧ ಕಠಿಣ ಕ್ರಮ
20. ಗುರುತರ ಸಂಚಾರ ನಿಯಮ ಉಲ್ಲಂಘನೆ ಎಸಗುವ ಚಾಲಕ/ಸವಾರರ ಚಾಲನಾ ಅನುಜ್ಞಾ ಪತ್ರಗಳ ಅಮಾನತ್ತಿಗೆ ಕ್ರಮ.

- **ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳು ಗುರ್ತಿಸುವಿಕೆ :**

ಬೆಂಗಳೂರು ನಗರದಲ್ಲಿ ವಾಹನಗಳ ಸಂಚಾರ ದಟ್ಟಣೆಯ ಆಧಾರದ ಮೇಲೆ ಒಟ್ಟು 12 ರಸ್ತೆಗಳನ್ನು ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳಾನ್ನಾಗಿ ಗುರ್ತಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ.

| | | | |
|---|---|---|---|
| 1. | ಬಳ್ಳಾರಿ ರಸ್ತೆ | – | **ಚಾಲುಕ್ಯ ವೃತ್ತದಿಂದ ಹೆಬ್ಬಾಳದವರೆಗೆ**<br>ವಿಂಡ್ಸರ್ ಮ್ಯಾನರ್ ಜಂಕ್ಷನ್ – ರಮಣ ಮಹರ್ಷಿ ರಸ್ತೆ – ಮೇಖ್ರಿ ವೃತ್ತದ ಮಾರ್ಗವಾಗಿ |

| | | | |
|---|---|---|---|
| 2 | ಹಳೇ ಮದ್ರಾಸ್ ರಸ್ತೆ | – | **ಟ್ರಿನಿಟಿ ವೃತ್ತದಿಂದ ಕೆ.ಆರ್. ಪುರಂ ವರೆಗೆ**<br>ಹಲಸೂರು ಕೆರೆ – ಹಳೆ ಮದ್ರಾಸ್ ರಸ್ತೆ ಮತ್ತು ಬೆನ್ನಿಗಾನಹಳ್ಳಿ<br>**ಹಾಗೂ ಕೆ.ಆರ್. ಪುರಂನಿಂದ ರಾಷ್ಟ್ರೀಯ ಹೆದ್ದಾರಿ 648 ವರೆಗೆ**<br>ಹೂಡಿ – ಐಟಿಪಿಎಲ್ ಮತ್ತು ಹೋಫ್ ಫಾರಂ ಮಾರ್ಗವಾಗಿ |
| 3 | ಹಳೇ ಏರ್‌ಪೋರ್ಟ್ ರಸ್ತೆ | – | **ಎ.ಎಸ್.ಸಿ ಸೆಂಟರ್ ನಿಂದ ಕಾಡುಗೋಡಿ ವರೆಗೆ**<br>ದೊಮ್ಮಲೂರು – ಮಾರತ್‌ಹಳ್ಳಿ – ಕುಂದಲಹಳ್ಳಿ – ವರ್ತೂರು ಮತ್ತು ಹೋಫ್ ಫಾರಂ ಮಾರ್ಗವಾಗಿ |
| 4 | ಸರ್ಜಾಪುರ ರಸ್ತೆ | – | **ಹೊಸೂರು ರಸ್ತೆ ಸೆಂಟ್ ಜಾನ್ಸ್ ಆಸ್ಪತ್ರೆಯಿಂದ ಬಿಬಿಎಂಪಿ ವ್ಯಾಪ್ತಿಯ ಕಾರ್ಮೆಲ್‌ರಾಂ ಬ್ರಿಡ್ಜ್‌ವರೆಗೆ**<br>ಜಕ್ಕಸಂದ್ರ – ಇಬ್ಲೂರು – ಹರಳೂರು ಜಂಕ್ಷನ್ ಮಾರ್ಗವಾಗಿ |
| 5 | ಹೊಸೂರು ರಸ್ತೆ | – | **ವೆಲ್ಲಾರ ಜಂಕ್ಷನ್ ನಿಂದ ಸಿಲ್ಕ್ ಬೋರ್ಡ್‌ವರೆಗೆ**<br>ಆಡುಗೋಡಿ – ಫೋರಂ ಮಾಲ್ ಮತ್ತು ಮಡಿವಾಳ ಮಾರ್ಗವಾಗಿ |
| 6 | ಬನ್ನೇರುಘಟ್ಟ ರಸ್ತೆ | – | **ಡೈರಿ ವೃತ್ತದಿಂದ ನೈಸ್ ರಸ್ತೆ ವರೆಗೆ**<br>ಜಯದೇವ ಫ್ಲೈಓವರ್ – ಜೆ.ಡಿ. ಮರ ಜಂಕ್ಷನ್ – ಬಿಳೇಕಳ್ಳಿ – ಅರಕೆರೆ ಮತ್ತು ಗೊಟ್ಟಿಗೆರೆ ಮಾರ್ಗವಾಗಿ |
| 7 | ಕನಕಪುರ ರಸ್ತೆ | – | **ಕೆ.ಆರ್. ರಸ್ತೆಯಿಂದ ನೈಸ್ ರಸ್ತೆವರೆಗೆ**<br>ಬನಶಂಕರಿ – ಸಾರಕ್ಕಿ – ಕೋಣನಕುಂಟೆ ಮಾರ್ಗವಾಗಿ |
| 8 | ಮೈಸೂರು ರಸ್ತೆ | – | **ಹಡ್ಸನ್ ವೃತ್ತದಿಂದ ನೈಸ್ ರಸ್ತೆವರೆಗೆ**<br>ಟೌನ್‌ಹಾಲ್ – ಸ್ಯಾಟಲೈಟ್ ಟೌನ್ – ನಾಯಂಡಹಳ್ಳಿ – ಜ್ಞಾನಭಾರತಿ – ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ & ಕೆಂಗೇರಿ ಸ್ಯಾಟಲೈಟ್ ಟೌನ್ ಮಾರ್ಗವಾಗಿ |
| 9 | ಮಾಗಡಿ ರಸ್ತೆ | – | **ಹಳೇ ಬಿನ್ನಿ ಮಿಲ್ ನಿಂದ ನೈಸ್ ರಸ್ತೆವರೆಗೆ**<br>ಟೋಲ್‌ಗೇಟ್ ಜಂಕ್ಷನ್ – ಜೈಮುನಿರಾವ್ ವೃತ್ತ – ಹೌಸಿಂಗ್ ಬೋರ್ಡ್ – ಕಾಮಾಕ್ಷಿಪಾಳ್ಯ – ಹೊರವರ್ತುಲ ರಸ್ತೆ – ಶ್ರೀಗಂಧಕಾವಲ್ ಸುಂಕದಕಟ್ಟೆ ಮಾರ್ಗವಾಗಿ. **ಹಾಗೂ**<br>**ಅಂಜನ ನಗರ ಔಟರ್ ರಿಂಗ್ ರಸ್ತೆ – ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಮೈಸೂರು ರಸ್ತೆ ವರೆಗೆ**<br>ಜಯದೇವ – ಜೆ.ಡಿ. ಮರ ಜಂಕ್ಷನ್ ಮಾರ್ಗವಾಗಿ |